

# ಪಾರ್ಕಿನ್ಸನ್‌ಗೆ ಸ್ಟಿಮುಲೇಷನ್ ಭರವಸೆ

ಪಾರ್ಕಿನ್ಸನ್ ಕಾಯಿಲೆ ಇದ್ದ ಫ್ರಾನ್ಸ್‌ನ ಮಹಿಳೆಯೊಬ್ಬರಿಗೆ ಬೆಂಗಳೂರಿನಲ್ಲಿ ಸ್ಟಿಮುಲೇಷನ್ ಚಿಕಿತ್ಸೆ ನೀಡಿ ರೋಗವನ್ನು ಗುಣಪಡಿಸಿದ ಪ್ರಕರಣ, ಈ ಕಾಯಿಲೆ ಹೊಂದಿರುವ ರೋಗಿಗಳಿಗೆ ಜೀವನದಲ್ಲಿ ಭರವಸೆ ಮೂಡಿಸುವಂಥದ್ದು.

■ **ಉಮಾ ಅನಂತ್**

ಫ್ರಾನ್ಸ್ ಮೂಲದ 65 ವರ್ಷದ ಮಹಿಳೆಗೆ 'ಪಾರ್ಕಿನ್ಸನ್ ಪ್ಲಸ್ ಸಿಂಡ್ರೋಮ್' ಸಮಸ್ಯೆ ಕಾಡುತ್ತಿತ್ತು, ಇವರಿಗೆ ಕಾಲುಗಳಲ್ಲಿ ಬಿಗಿತ, ನಡಿಗೆಯಲ್ಲಿ ತೊಂದರೆ, ಕಾಲು ಮರಗಟ್ಟುವುದು, ದೌರ್ಬಲ್ಯ, ಖಿನ್ನತೆ ಇತರೆ ಸಮಸ್ಯೆಗಳಿದ್ದವು. ಇದರಿಂದ ಅವರು ಎಂಟು ತಿಂಗಳ ಕಾಲ ಗಾಲಿಕುರ್ಚಿಯಲ್ಲಿಯೇ ಕುಳಿತು ಓಡಾಡಬೇಕಿತ್ತು. ಬೆಂಗಳೂರಿನ ಫೋರ್ಟಿಸ್ ಆಸ್ಪತ್ರೆಯಲ್ಲಿ ಈ ಕಾಯಿಲೆಗೆ ಚಿಕಿತ್ಸೆ ಲಭ್ಯ ಎಂಬ ಮಾಹಿತಿ ಆಧರಿಸಿ ಇಲ್ಲಿಗೆ ಧಾವಿಸಿದ ಮಹಿಳೆಗೆ ಶಸ್ತ್ರಚಿಕಿತ್ಸೆ ನಡೆಸಿ ಸಮಸ್ಯೆಗೆ ಪರಿಹಾರ ಒದಗಿಸಲಾಯಿತು. ಈ ಮೂಲಕ ದೇಶದಲ್ಲಿಯೇ ಮೊದಲ ಬಾರಿ ನಡೆಸಿದ ಶಸ್ತ್ರಚಿಕಿತ್ಸೆ ಇದು ಎಂಬ ಹೆಗ್ಗಳಿಕೆಗೂ ಈ ಆಸ್ಪತ್ರೆ ಪಾತ್ರವಾಯಿತು.

'ಇಳಿವಯಸ್ಸಿನಲ್ಲಿ ಕೈಕಾಲು ನಡುಕ ಉಂಟು ಮಾಡುವ ಪಾರ್ಕಿನ್ಸನ್ ಕಾಯಿಲೆ ಸರ್ವೇಸಾಮಾನ್ಯ. 'ಪಾರ್ಕಿನ್ಸನ್ ಪ್ಲಸ್ ಸಿಂಡ್ರೋಮ್' ಎಂಬುದು ತೀವ್ರತರದ ಪಾರ್ಕಿನ್ಸನ್ ಸಮಸ್ಯೆ. ಈ ತೊಂದರೆಯನ್ನು 'ಪಾರ್ಕಿನ್ಸೋನಿಸಂ' ಎಂದೂ ಕರೆಯಲಾಗುತ್ತದೆ. ಇದು ಪಾರ್ಕಿನ್ಸನ್ ಕಾಯಿಲೆಯ ಲಕ್ಷಣಗಳನ್ನೇ ಹೊಂದಿದ್ದರೂ, ಚಿಕಿತ್ಸೆ ಮಾತ್ರ ಪಾರ್ಕಿನ್ಸನ್‌ಗೆ ನೀಡುವ ಚಿಕಿತ್ಸೆಗಿಂತ ಕೊಂಚ ಭಿನ್ನ. ಹೊಸ ವಿಧಾನದ ಈ ಚಿಕಿತ್ಸೆಯೇ 'ಹೈ ಸರ್ವಿಕಲ್ ಸ್ಪೈನಲ್‌ಕಾರ್ಡ್ ಸ್ಟಿಮುಲೇಷನ್' ಚಿಕಿತ್ಸೆ. ಮೆದುಳಿಗೆ ಸಂಪರ್ಕ ಹೊಂದಿರುವ ಸ್ಪೈನಲ್‌ಕಾರ್ಡ್ ಉದ್ದಕ್ಕೂ ವಿದ್ಯುಚ್ಛಕ್ತಿ ಹರಿಸುವ ಮೂಲಕ ನಡೆಸುವ ಚಿಕಿತ್ಸೆಯಿದು. ಶಸ್ತ್ರಚಿಕಿತ್ಸೆ ನಡೆದು 10 ದಿನಗಳ ಬಳಿಕ ಮಹಿಳೆಯನ್ನು ಮನೆಗೆ ಕಳಿಸಲಾಗಿದ್ದು, ಈಕೆ ಸಂಪೂರ್ಣ ಗುಣಮುಖರಾಗಿದ್ದಾರೆ' ಎಂದು ವಿವರ ನೀಡುತ್ತಾರೆ ಈ ಆಸ್ಪತ್ರೆಯ ನರ ಶಸ್ತ್ರಚಿಕಿತ್ಸೆ ವಿಭಾಗದ ನಿರ್ದೇಶಕ, ಡಾ ರಘುರಾಮ್ ಜಿ.

'ಇದು ಅತ್ಯಾಧುನಿಕ ಚಿಕಿತ್ಸೆಯಾಗಿದ್ದು, ಆಫ್ರಿಕಾ, ಇಂಗ್ಲೆಂಡ್, ಪ್ಯಾರಿಸ್‌ಗಳಂತಹ ಮುಂದುವರಿದ ರಾಷ್ಟ್ರಗಳಲ್ಲೂ ಇದು ಲಭ್ಯವಿಲ್ಲ. ಹೀಗಾಗಿ ಮಹಿಳೆ ಫ್ರಾನ್ಸ್‌ನಿಂದ ಬೆಂಗಳೂರಿಗೆ ಬರಬೇಕಾಯಿತು' ಎಂದೂ ಹೇಳುತ್ತಾರೆ ಈ ವೈದ್ಯರು.

## ಇನ್ನೊಂದು ಚಿಕಿತ್ಸೆ

ಮತ್ತೊಂದು ಪ್ರಕರಣದಲ್ಲಿ 68 ವರ್ಷದ ಪಾರ್ಕಿನ್ಸನ್ ಕಾಯಿಲೆಯಿದ್ದ ಪ್ರಕಾಶ್ ಎಂಬ ವ್ಯಕ್ತಿಗೆ 'ನ್ಯೂರೋಸ್ಮಾರ್ಟ್ ಪೋರ್ಟಬಲ್ ಮೈಕ್ರೊ ಎಲೆಕ್ಟ್ರೋಡ್ ರೆಕಾರ್ಡಿಂಗ್ (MER) ಸಿಸ್ಟಮ್' ಬಳಸಿ ಚಿಕಿತ್ಸೆ ನೀಡಲಾಗಿದೆ. ಈ ವ್ಯಕ್ತಿ ಚೇತರಿಸಿಕೊಂಡಿದ್ದು, ಇದೂ ಅತ್ಯಾಧುನಿಕ ವೈದ್ಯಕೀಯ ಚಿಕಿತ್ಸೆ ಎಂಬ ಅಗ್ಗಳಿಕೆಗೆ ಪಾತ್ರವಾಗಿದೆ.

ಪ್ರಕಾಶ್, ಪಾರ್ಕಿನ್ಸನ್ ಕಾಯಿಲೆಗೆ ತುತ್ತಾಗಿದ್ದರು, ಅಷ್ಟೇ ಅಲ್ಲದೆ ರಕ್ತದೊತ್ತಡ, ಮಧುಮೇಹದಂತಹ